**ಕುವೆಂಪು ವಿಶ್ವವಿದ್ಯಾಲಯ**

ದಿನಾಂಕ:06-03-2024 ರಂದು ಬುಧವಾರ ಪೂರ್ವಾಹ್ನ:11.00 ಗಂಟೆಗೆ ವಿಶ್ವವಿದ್ಯಾಲಯದ **ಆಡಳಿತ ಭವನದ ಹೊಸ "ಸಿಂಡಿಕೇಟ್ ಸಭಾಂಗಣದಲ್ಲಿ"** ನಡೆದ ವಿದ್ಯಾವಿಷಯಕ ಪರಿಷತ್ತಿನ ಸಾಮಾನ್ಯ ಸಭೆಯ ನಡಾವಳಿಗಳು.

**ಹಾಜರಿದ್ದ ಸದಸ್ಯರು :**

1. ಪ್ರೊ. ಎಸ್.ವಿ. ಕೃಷ್ಣಮೂರ್ತಿ ಕುಲಪತಿಗಳು — ಅಧ್ಯಕ್ಷರು
2. ಶ್ರೀ ಎ.ಎಲ್. ಮಂಜುನಾಥ್ ಕೆ.ಎ.ಎಸ್.. ಕುಲಸಚಿವರು — ಸದಸ್ಯ ಕಾರ್ಯದರ್ಶಿ
3. ಪ್ರೊ. ಗೋಪಿನಾಥ್ ಎಸ್.ಎಂ. ಕುಲಸಚಿವರು (ಮೌಲ್ಯಮಾಪನ) — ಸದಸ್ಯರು
4. ಡಾ. ವಿಷ್ಣುಮೂರ್ತಿ ಕೆ.ಎ. ಜಂಟಿ ನಿರ್ದೇಶಕರು — ಸದಸ್ಯರು
5. ಶ್ರೀ ಡಿ.ಎಸ್. ಅರುಣ್, ಶಾಸಕರು, ಕರ್ನಾಟಕ ವಿಧಾನ ಪರಿಷತ್ — ಸದಸ್ಯರು
6. ಡಾ. ಲಕ್ಷ್ಮೀಶ ಎ.ಎಸ್. ಪ್ರಾಂಶುಪಾಲರು — ಸದಸ್ಯರು
7. ಶ್ರೀ ತ್ರಿಪುರ ಮಹೇಶ್ವರ ಎಂ., ಪ್ರಾಂಶುಪಾಲರು — ಸದಸ್ಯರು
8. ಡಾ. ಉಮೇಶ್ ಕೆ., ಪ್ರಾಂಶುಪಾಲರು — ಸದಸ್ಯರು
9. ಡಾ. ಶೇಖರ, ಪ್ರಾಂಶುಪಾಲರು — ಸದಸ್ಯರು
10. ಡಾ. ಪರಮೇಶ ಮಸಲವಾಡ., ಪ್ರಾಂಶುಪಾಲರು — ಸದಸ್ಯರು
11. ಡಾ. ಮುಷ್ತಾಕ್ ಅಹಮದ್., ಪ್ರಾಂಶುಪಾಲರು — ಸದಸ್ಯರು
12. ಡಾ. ಮಧು ಜಿ., ಪ್ರಾಂಶುಪಾಲರು — ಸದಸ್ಯರು
13. ಶ್ರೀ ವಿನ್‌ಸೆಂಟ್ ಕಾರ್ಡೋಜ., ಪ್ರಾಂಶುಪಾಲರು — ಸದಸ್ಯರು
14. ಡಾ. ಸಣ್ಣಹನುಮಪ್ಪ ಜಿ., ಪ್ರಾಂಶುಪಾಲರು — ಸದಸ್ಯರು
15. ಡಾ. ನಾಗರಾಜ ಪ್ರಾಧ್ಯಾಪಕರು — ಸದಸ್ಯರು
16. ಡಾ. ರಾಜೇಶ್ವರ್ ಎ.ಎನ್. ಪ್ರಾಧ್ಯಾಪಕರು — ಸದಸ್ಯರು
17. ಡಾ. ಸರ್ವಮಂಗಳ ಜಿ. ಪ್ರಾಧ್ಯಾಪಕರು — ಸದಸ್ಯರು
18. ಡಾ. ಪಾಟೀಲ್ ಸಂಗನಗೌಡ ಎಸ್. ಪ್ರಾಧ್ಯಾಪಕರು — ಸದಸ್ಯರು
19. ಡಾ. ಗುರುಲಿಂಗಯ್ಯ ಎಂ. ಡೀನರು, ಕಲಾ ನಿಕಾಯ — ಸದಸ್ಯರು
20. ಡಾ. ಎಸ್.ವಿ. ಕೃಷ್ಣಮೂರ್ತಿ, ಡೀನರು, ವಿಜ್ಞಾನ ನಿಕಾಯ — ಸದಸ್ಯರು
21. ಡಾ. ಆರ್. ಹಿರೇಮಣಿನಾಯ್ಕ್, ಡೀನರು, ವಾಣಿಜ್ಯ ನಿಕಾಯ — ಸದಸ್ಯರು
22. ಡಾ. ಜಗನ್ನಾಥ ಕೆ. ಡಾಂಗೆ. ಡೀನರು, ಶಿಕ್ಷಣ ನಿಕಾಯ — ಸದಸ್ಯರು
23. ಡಾ. ಆರ್.ಹೆಚ್. ವಾಲ್ಮೀಕಿ ಗ್ರಂಥಪಾಲಕರು, (ಪ್ರಭಾರ) — ಸದಸ್ಯರು
24. ಡಾ. ನಾಗರಾಜ. ನಿರ್ದೇಶಕರು, ಕಾಲೇಜು ಅಭಿವೃದ್ಧಿ ಪರಿಷತ್, — ಸದಸ್ಯರು
25. ಡಾ. ಎನ್.ಡಿ. ವಿರೂಪಾಕ್ಷ ನಿರ್ದೇಶಕರು ದೈಹಿಕ ಶಿಕ್ಷಣ — ಸದಸ್ಯರು
26. ಶ್ರೀ ಬಂಗಾರಪ್ಪ ಜಿ. ಹಣಕಾಸು ಅಧಿಕಾರಿಗಳು — ಸದಸ್ಯರು
27. ಪ್ರೊ. ಹಿರೇಮಣಿನಾಯ್ಕ ಆರ್. ನಿರ್ದೇಶಕರು, ದೂರ ಶಿಕ್ಷಣ ನಿರ್ದೇಶನಾಲಯ — ಸದಸ್ಯರು
28. ಪ್ರೊ. ಎನ್.ಬಿ. ತಿಪ್ಪೇಸ್ವಾಮಿ, ನಿರ್ದೇಶಕರು, ಐ.ಕ್ಯೂ.ಎ.ಸಿ. — ಸದಸ್ಯರು

**ಗೈರು ಹಾಜರಾದ ಸದಸ್ಯರು :**

1. ಶ್ರೀ ಬಿ.ಕೆ. ಸಂಗಮೇಶ್ವರ್, ಶಾಸಕರು ಭದ್ರಾವತಿ ಕ್ಷೇತ್ರ — ಸದಸ್ಯರು
2. ಶ್ರೀ ಸೂರಜ್ ರೇವಣ್ಣ, ಶಾಸಕರು, ಕರ್ನಾಟಕ ವಿಧಾನ ಪರಿಷತ್ — ಸದಸ್ಯರು
3. ಡಾ. ನರಸಿಂಹಮೂರ್ತಿ ಎಸ್.ಕೆ. ನಿರ್ದೇಶಕರು ಯೋಜನೆ, ಮೇಲ್ವಿಚಾರಣೆ ಮತ್ತು ಮೌಲ್ಯಮಾಪನ — ಸದಸ್ಯರು
4. ಡಾ. ಅನಂತ ಎಸ್. ಪ್ರಾಂಶುಪಾಲರು — ಸದಸ್ಯರು
5. ಡಾ. ನಾಗ್ಯಾನಾಯ್ಕ ಬಿ.ಹೆಚ್. ಪ್ರಾಧ್ಯಾಪಕರು — ಸದಸ್ಯರು
6. ಡಾ. ಜಿ. ಪ್ರಶಾಂತ ನಾಯಕ, ನಿರ್ದೇಶಕರು, ವಿದ್ಯಾರ್ಥಿ ಕ್ಷೇಮಪಾಲನಾ — ಸದಸ್ಯರು
7. ನಿರ್ದೇಶಕರು, ತಾಂತ್ರಿಕ ಶಿಕ್ಷಣ ಇಲಾಖೆ, ಬೆಂಗಳೂರು. — ಸದಸ್ಯರು

**<u>ಪೂರ್ವಾನುಮತಿಯೊಂದಿಗೆ ಗೈರು ಹಾಜರಾದ ಸದಸ್ಯರು:</u>**

1. ಶ್ರೀ ಹೆಚ್.ಡಿ. ತಮ್ಮಯ್ಯ, ಶಾಸಕರು ಚಿಕ್ಕಮಗಳೂರು ಕ್ಷೇತ್ರ — ಸದಸ್ಯರು



Scanned with OKEN Scanner

**ಪ್ರಸ್ತಾವನೆ:**

ಪ್ರಾರಂಭದಲ್ಲಿ ಸಭೆಗೆ ಆಗಮಿಸಿದ ಸದಸ್ಯರುಗಳೆಲ್ಲರಿಗೂ ಮಾನ್ಯ ಕುಲಸಚಿವರು ಆತ್ಮೀಯವಾಗಿ ಸ್ವಾಗತ ಕೋರಿದರು. ಘನತೆವೆತ್ತ ಕುಲಾಧಿಪತಿಯವರಿಂದ ನೇಮಕಗೊಂಡ ಮಾನ್ಯ ಪ್ರಭಾರ ಕುಲಪತಿಯವರಾದ ಪ್ರೊ. ಎಸ್.ವಿ.ಕೃಷ್ಣಮೂರ್ತಿ, ಸರ್ಕಾರದಿಂದ ಕುಲಸಚಿವ (ಆಡಳಿತ) ಆಗಿ ನೇಮಕಗೊಂಡ ಶ್ರೀ ಎ.ಎಲ್. ಮಂಜುನಾಥ, ಕೆ.ಎ.ಎಸ್., (ಸೂಪರ್‌ಟೈಂ ಸ್ಕೇಲ್) ಹಾಗೂ ಕರ್ನಾಟಕ ರಾಜ್ಯ ವಿಶ್ವವಿದ್ಯಾಲಯಗಳ ಅಧಿನಿಯಮ–2000, ಪ್ರಕರಣ–38(1) ರನ್ವಯ ವಿದ್ಯಾವಿಷಯಕ ಪರಿಷತ್ತಿಗೆ ನೂತನವಾಗಿ ಸರ್ಕಾರದಿಂದ ನೇಮಕಗೊಂಡ ವಿಧಾನಪರಿಷತ್ತಿನ ಸದಸ್ಯರುಗಳಾದ ಶ್ರೀ ಡಿ.ಎಸ್.ಅರುಣ್ ಮತ್ತು ಶ್ರೀ ಸೂರಜ್‌ರೇವಣ್ಣ ಇವರುಗಳನ್ನು ಆತ್ಮೀಯವಾಗಿ ಸ್ವಾಗತಿಸಲಾಯಿತು. ಪ್ರಭಾರ ಕುಲಪತಿಯಾಗಿ ಅವಧಿ ಮುಗಿಸಿರುವ ಪ್ರೊ. ಎಸ್.ವೆಂಕಟೇಶ್ ಹಾಗೂ ಕರ್ನಾಟಕ ಸರ್ಕಾರದ ಸಿಬ್ಬಂದಿ ಮತ್ತು ಆಡಳಿತ ಇಲಾಖೆಗೆ ವರ್ಗಾವಣೆಗೊಂಡ ಕುಲಸಚಿವರಾದ ಶ್ರೀ ವಿಜಯಕುಮಾರ್, ಹೆಚ್.ಬಿ. ಕೆ.ಎ.ಎಸ್. ಇವರು ಹಾಗೂ ವಿದ್ಯಾವಿಷಯಕ ಪರಿಷತ್ತಿನ ಸದಸ್ಯರಾಗಿ ಸರ್ಕಾರದಿಂದ ನೇಮಕಗೊಂಡು ಅವಧಿ ಮುಗಿಸಿರುವ ಸದಸ್ಯರುಗಳಾದ ಶ್ರೀ ಚಂದ್ರಶೇಖರ್ ಎಸ್., ಶ್ರೀ ಎಂ.ಎ. ರಮೇಶ್ ಹೆಗಡೆ, ಶ್ರೀಮತಿ ಗೀತಾಂಜಲಿ, ಶ್ರೀಮತಿ ಮಮತಾ ಸಾಲಿ, ಶ್ರೀ ಕುಮಾರೇಗೌಡ, ಶ್ರೀಮತಿ ಎಸ್.ಬಿ. ಅನುಪಮ, ಶ್ರೀ ಮನೋಜ್ ಸಲ್ಡಾನ, ಡಾ.ರವಿಕಿರಣ, ಹೆಚ್.ಕೆ. ಮತ್ತು ಶ್ರೀ ಶಿವಣ್ಣ, ಪಿ. ಇವರಗಳು ಸೇವೆಯನ್ನು ಸ್ಮರಿಸಿ ಅಭಿನಂದನೆ ಸಲ್ಲಿಸಲಾಯಿತು.

ಮಾನ್ಯ ಕುಲಪತಿಯವರು ಪ್ರಾಸ್ತಾವಿಕವಾಗಿ ಮಾತನಾಡುತ್ತಾ, ಕರ್ನಾಟಕ ರಾಜ್ಯ ವಿಶ್ವವಿದ್ಯಾಲಯಗಳ ಅಧಿನಿಯಮ ಹಾಗೂ ನಿಯಮಗಳ ಪ್ರಕಾರ ಸಭೆ ನಡೆಸಿಕೊಡುವಂತೆ ಸದಸ್ಯರಲ್ಲಿ ಮನವಿ ಮಾಡಿದರು. ನಂತರ ಮಾತನಾಡಿದ ಅವರು, 2023–24ನೇ ಸಾಲಿನಲ್ಲಿ ವಿಶ್ವವಿದ್ಯಾಲಯದ ವಿವಿಧ ವಿಭಾಗಗಳ ವತಿಯಿಂದ 11 ಕಾರ್ಯಾಗಾರಗಳನ್ನು ಏರ್ಪಡಿಸಲಾಗಿದೆ. ಮೂವರು ಅಧ್ಯಾಪಕರು ತಮ್ಮ ಸಂಶೋಧನಾ ಪೇಟೆಂಟ್‌ಗೆ ಅರ್ಜಿ ಸಲ್ಲಿಸಿದ್ದು, 02 ಮಂಜೂರಾಗಿದೆ. ಈ ಅವಧಿಯಲ್ಲಿ ಶೈಕ್ಷಣಿಕ ಮತ್ತು ಸಂಶೋಧನಾ ಉದ್ದೇಶದ 04 MOU ಆಗಿವೆ. ಎನ್.ಐ.ಆರ್.ಎಫ್. ನಲ್ಲಿ ಪ್ರಸ್ತುತ 101–150ರ ರ್‍ಯಾಂಕ್‌ನಲ್ಲಿದ್ದು ನ್ಯಾಕ್‌ನಿಂದ 'ಎ' ಮಾನ್ಯತೆ ಇದೆ. ನ್ಯಾಕ್ ಮರು ಮೌಲ್ಯಮಾಪನದ ಕೆಲಸಗಳು ಆಗುತ್ತಿದ್ದು, ಮುಂಬರುವ ಜೂನ್–ಜುಲೈ ಅವಧಿಯಲ್ಲಿ ಸಮಿತಿ ವಿಶ್ವವಿದ್ಯಾಲಯಕ್ಕೆ ಭೇಟಿ ನೀಡಬಹುದು. ವಿಶ್ವವಿದ್ಯಾಲಯದಲ್ಲಿ ಪ್ರಸ್ತುತ ಹಣಕಾಸಿನ ಮತ್ತು ಸಿಬ್ಬಂದಿಗಳ ಕೊರತೆ ಇದೆ. ಯು.ಯು.ಸಿ.ಎಂ.ಎಸ್.ನಿಂದ ಕೆಲವು ಸಮಸ್ಯೆಗಳು ಆಗಿದ್ದು, ಬಹಳಷ್ಟನ್ನು ಈಗಾಗಲೇ ಪರಿಹರಿಸಲಾಗಿದೆ ಎಂದರು. ಭಾರತ ಸರ್ಕಾರದ ಡಿ.ಎಸ್.ಟಿ. ಪರ್ಸ್ ಅಡಿಯಲ್ಲಿ ಸುಮಾರು 15–30 ಕೋಟಿ ಅನುದಾನ ಪಡೆಯಲು ಪ್ರಸ್ತಾವನೆ ಸಿದ್ಧಪಡಿಸಲಾಗುತ್ತಿದೆ ಎಂದ ಅವರು ಕುವೆಂಪು ವಿಶ್ವವಿದ್ಯಾಲಯದ ಉನ್ನತೀಕರಣಕ್ಕೆ ಎಲ್ಲಾ ಸದಸ್ಯರ ಸಹಕಾರ ಕೋರಿದರು. ನಂತರ ಕಾರ್ಯಸೂಚಿಯ ಪ್ರಕಾರ ವಿಷಯಗಳನ್ನು ಚರ್ಚೆಗೆ ಕೈಗೆತ್ತಿಕೊಳ್ಳಲಾಯಿತು.

**ಪ್ರಾಧಿಕಾರಗಳ ವಿಭಾಗ**

**2024:ಎಸಿ–1.01:** ದಿನಾಂಕ:22–11–2023 ರಂದು ನಡೆದ ವಿದ್ಯಾವಿಷಯಕ ಪರಿಷತ್ ಸಾಮಾನ್ಯ ಸಭೆಯ ನಡಾವಳಿಯನ್ನು ದೃಢೀಕರಿಸುವ ಕುರಿತು.

**ನಿರ್ಣಯ:** ಸದಸ್ಯರುಗಳಿಂದ ಯಾವುದೇ ಆಕ್ಷೇಪಣೆಗಳು ಬಂದಿಲ್ಲವಾದ್ದರಿಂದ ದಿನಾಂಕ:22–12–2023 ರಂದು ನಡೆದ "ವಿದ್ಯಾವಿಷಯಕ ಪರಿಷತ್ ಸಾಮಾನ್ಯ ಸಭೆ"ಯ ನಡಾವಳಿಗಳನ್ನು ಸಭೆಯು ಅನುಮೋದಿಸಿ ದೃಢೀಕರಿಸಿತು.

**2024:ಎಸಿ–1.02:** ದಿನಾಂಕ:18–03–2023 ರಂದು ನಡೆದ ವಿದ್ಯಾವಿಷಯಕ ಪರಿಷತ್ ಸಾಮಾನ್ಯ ಸಭೆಯ ನಡಾವಳಿಗಳ ಮೇಲೆ ಕೈಗೊಂಡ ಕ್ರಮ.

**ನಿರ್ಣಯ:** ದಿನಾಂಕ:18–03–2023 ರಂದು ನಡೆದ ವಿದ್ಯಾವಿಷಯಕ ಪರಿಷತ್ ಸಾಮಾನ್ಯ ಸಭೆಯ ನಡಾವಳಿಗಳ ಮೇಲೆ ಕೈಗೊಂಡ ಕ್ರಮಗಳನ್ನು ಅನುಮೋದಿಸಿದ ಸಭೆಯು, ಸದಸ್ಯರಾದ ಡಾ.ಪರಮೇಶ ಮಸಲವಾಡರವರ ಸಲಹೆಯಂತೆ ಸಭೆಯು, ನಡಾವಳಿಗಳ ಮೇಲೆ ಕೈಗೊಂಡ ಕ್ರಮಗಳನ್ನು ಸಭೆಗೆ ಮಂಡಿಸುವಾಗ ಪುಟ ಸಂಖ್ಯೆಗಳನ್ನು ನಮೂದಿಸಬೇಕು ಎಂಬುದನ್ನು ಮುಂದಿನ ದಿನಗಳಲ್ಲಿ ಜಾರಿಗೆ ತರಲು ನಿರ್ಣಯಿಸಲಾಯಿತು.

**2024:ಎಸಿ–1.03:** ದಿನಾಂಕ:22–11–2023 ರಂದು ನಡೆದ ವಿದ್ಯಾವಿಷಯಕ ಪರಿಷತ್ ಸಾಮಾನ್ಯ ಸಭೆಯ ನಡಾವಳಿಗಳ ಮೇಲೆ ಕೈಗೊಂಡ ಕ್ರಮ.



Scanned with OKEN Scanner

**ನಿರ್ಣಯ:** ದಿನಾಂಕ:22-11-2023 ರಂದು ನಡೆದ ವಿದ್ಯಾವಿಷಯಕ ಪರಿಷತ್ ಸಾಮಾನ್ಯ ಸಭೆಯ ನಡಾವಳಿಗಳ ಮೇಲೆ ಕೈಗೊಂಡ ಕ್ರಮಗಳನ್ನು ಅನುಮೋದಿಸಲಾಯಿತು

**2024:ಎಸಿ-1.04:** ವಿಶ್ವವಿದ್ಯಾಲಯದ ಹಣಕಾಸು ಸಮಿತಿಗೆ ವಿದ್ಯಾವಿಷಯಕ ಪರಿಷತ್ ಸದಸ್ಯರನ್ನು ಆಯ್ಕೆ ಮಾಡುವ ಕುರಿತು.

**ನಿರ್ಣಯ:** ವಿಶ್ವವಿದ್ಯಾಲಯದ ಹಣಕಾಸು ಸಮಿತಿಗೆ ವಿದ್ಯಾವಿಷಯಕ ಪರಿಷತ್ ಸದಸ್ಯರಾದ ಶ್ರೀ ಡಿ.ಎಸ್.ಅರುಣ್-ಇವರನ್ನು ಸರ್ವಾನುಮತದಿಂದ ನಾಮನಿರ್ದೇಶನ ಮಾಡಲಾಯಿತು.

**ಕಾಲೇಜು ಅಭಿವೃದ್ಧಿ ಪರಿಷತ್ ವಿಭಾಗ**

**2024:ಎಸಿ-1.05:** 2023-24ನೇ ಸಾಲಿಗೆ ಸರ್ಕಾರಿ ಪ್ರಥಮ ದರ್ಜೆ ಕಾಲೇಜುಗಳಲ್ಲಿ ಹೊಸ ಕೋರ್ಸ್/ ವಿಷಯಗಳಿಗೆ ನವೀನ ಸಂಯೋಜನೆ ನೀಡುವ ಬಗ್ಗೆ.

**ನಿರ್ಣಯ:** ವಿಷಯವನ್ನು ಮುಂದಿನ ಸಭೆಗೆ ಮುಂದೂಡಲಾಯಿತು.

**2024:ಎಸಿ-1.06:** ಚಿಕ್ಕಮಗಳೂರು ಜಿಲ್ಲೆ 03 ಕಾಲೇಜುಗಳು ವಿಶ್ವವಿದ್ಯಾಲಯದ ಸಂಯೋಜನೆಯಿಂದ ಶಾಶ್ವತವಾಗಿ ರದ್ದುಪಡಿಸುವಂತೆ ಕೋರಿರುವ ಬಗ್ಗೆ.

**ನಿರ್ಣಯ:** ವಿಷಯವನ್ನು ಮುಂದಿನ ಸಭೆಗೆ ಮುಂದೂಡಲಾಯಿತು.

**2024:ಎಸಿ-1.07:** ಕಾಲೇಜು ಅಭಿವೃದ್ಧಿ ಪರಿಷತ್ ಸಲಹಾ ಸಮಿತಿ ನಡಾವಳಿ ಮತ್ತು ಸಂಯೋಜನೆ ಶುಲ್ಕಗಳ ಪರಿಷ್ಕರಣ ಪಟ್ಟಿಯ ಅನುಮೋದನೆ ಕುರಿತು.

**ನಿರ್ಣಯ:** ವಿಷಯವನ್ನು ಮುಂದಿನ ಸಭೆಗೆ ಮುಂದೂಡಲಾಯಿತು.

**2024:ಎಸಿ-1.08:** ಬಿ.ಇಡಿ. ಕಾಲೇಜ್‌ನ್ನು ಸ್ಥಾಪಿಸಲು ಅನುಮತಿ ನೀಡುವ ಸಂಬಂಧ ನಿರಾಪೇಕ್ಷಣಾ ಪತ್ರವನ್ನು ನೀಡುವ ಕುರಿತು.

**ನಿರ್ಣಯ:** ವಿಷಯವನ್ನು ಮುಂದಿನ ಸಭೆಗೆ ಮುಂದೂಡಲಾಯಿತು.

**2024:ಎಸಿ-1.09:** ಬಿ.ಇಡಿ. ಕಾಲೇಜುಗಳ ಪ್ರಾಂಶುಪಾಲರ ಮತ್ತು ಪ್ರಶಿಕ್ಷಕರುಗಳ ನೇಮಕಾತಿ / ನವೀಕರಣಕ್ಕೆ ಸಂಬಂಧಿಸಿದಂತೆ ಶುಲ್ಕ ಪಾವತಿ ಕುರಿತು.

**ನಿರ್ಣಯ:** ವಿಷಯವನ್ನು ಮುಂದಿನ ಸಭೆಗೆ ಮುಂದೂಡಲಾಯಿತು.

**ಹೆಚ್ಚುವರಿ ಕಾರ್ಯಸೂಚಿ**

**ಹಣಕಾಸು ವಿಭಾಗ**

**2024:ಎಸಿ-1.10:** 2024-25ನೇ ಆರ್ಥಿಕ ವರ್ಷದ ಆಯ-ವ್ಯಯ ಅಂದಾಜು ಪರಿಶೀಲನೆ ಮತ್ತು ಅನುಮೋದನೆಗಾಗಿ.

**ಚರ್ಚೆ:** ದಿನಾಂಕ:26-02-2024ರಂದು ನಡೆದ ಹಣಕಾಸು ಸಮಿತಿ ಸಭೆ ಮತ್ತು ದಿನಾಂಕ:28-02-2024 ರಂದು ನಡೆದ ಸಿಂಡಿಕೇಟ್ ಸಭೆಯಲ್ಲಿ ಅನುಮೋದನೆಯಾಗಿರುವ ವಿಶ್ವವಿದ್ಯಾಲಯದ 2024-25ನೇ ಆರ್ಥಿಕ ವರ್ಷದ ರೂ.185.82 ಲಕ್ಷಗಳ ಕೊರತೆಯ ಆಯ-ವ್ಯಯ ಅಂದಾಜನ್ನು ಹಣಕಾಸು ಅಧಿಕಾರಿಗಳು ಸಭೆಗೆ ಮಂಡಿಸಿ ಅನುಮೋದನೆ ನೀಡುವಂತೆ ಕೋರಿದರು. ದೈಹಿಕ ಶಿಕ್ಷಣ ವಿಭಾಗದ ನಿರ್ದೇಶಕರಾದ ಡಾ.ಎನ್.ಡಿ.ವಿರೂಪಾಕ್ಷರವರು ಮಾತನಾಡಿ, ಕ್ರೀಡಾ ಚಟುವಟಿಕೆಗಳಿಗಾಗಿ ರೂ.63.08 ಲಕ್ಷಗಳನ್ನು ಒದಗಿಸಿದೆ. ರಾಷ್ಟ್ರದ ವಿವಿಧ ವಿಶ್ವವಿದ್ಯಾಲಯಗಳು ಸಂಘಟಿಸುವ ಸುಮಾರು 37 ಕ್ರೀಡೆಗಳಲ್ಲಿ ನಮ್ಮ ವಿಶ್ವವಿದ್ಯಾಲಯದ ತಂಡಗಳು ಪಾಲ್ಗೊಳ್ಳುತ್ತಿದೆ. ಇತ್ತೀಚಿನ ದಿನಗಳಲ್ಲಿ ವಲಯವಾರು ಹೆಚ್ಚಿನ ಕ್ರೀಡಾಕೂಟಗಳು ನಡೆಯುತ್ತಿವೆ. ಅಂತರಕಾಲೇಜು ಸ್ಪರ್ಧೆಗಳಲ್ಲಿ ಕೂಡ ಹೆಚ್ಚಿನ ಕ್ರೀಡೆಗಳನ್ನು ಸೇರ್ಪಡೆ ಮಾಡಲಾಗಿದೆ. ಈ ಹಿನ್ನೆಲೆಯಲ್ಲಿ ಆಯ-ವ್ಯಯದಲ್ಲಿ ಒದಗಿಸಿರುವ ಅನುದಾನ ಸಾಕಾಗುವುದಿಲ್ಲ. ವಿದ್ಯಾರ್ಥಿಗಳಿಂದ ಕ್ರೀಡಾಶುಲ್ಕವಾಗಿ ಬಹಳಷ್ಟು ಹಣ ಸಂಗ್ರಹವಾಗುತ್ತಿದೆ. ಆದರೆ, ಕ್ರೀಡೆಗೆ ಕಡಿಮೆ ಅನುದಾನ ಹಂಚಿಕೆ ಮಾಡಿದೆ.



Scanned with OKEN Scanner

ಆದುದರಿಂದ, ಕ್ರೀಡಾ ಅನುದಾನವನ್ನು ರೂ.85.00 ಲಕ್ಷಗಳಿಗೆ ಪರಿಷ್ಕರಿಸಿ, ಹೆಚ್ಚಿನ ಅನುದಾನ ಒದಗಿಸುವಂತೆ ಹಾಗೂ ಕಡೂರು ಮತ್ತು ಚಿಕ್ಕಮಗಳೂರಿನ ಸ್ನಾತಕೋತ್ತರ ಕೇಂದ್ರಗಳ ಕ್ರೀಡಾಚಟುವಟಿಕೆಗಳಿಗೆ ಪ್ರತ್ಯೇಕ ಅನುದಾನ ಒದಗಿಸುವಂತೆ ಹಾಗೂ ಬಿ.ಇಡಿ. ಕಾಲೇಜುಗಳ ಕ್ರೀಡಾಕೂಟಗಳಿಗೆ ಕೂಡ ಅನುದಾನ ಒದಗಿಸುವಂತೆ ಕೋರಿದರು. ಮಾನ್ಯ ಕುಲಪತಿಯವರು ಮಾತನಾಡಿ, ವಿಶ್ವವಿದ್ಯಾಲಯದ ಎಲ್ಲಾ ಶೈಕ್ಷಣಿಕ, ಸಂಶೋಧನಾ, ವಿದ್ಯಾರ್ಥಿ ಬೆಂಬಲ ಮತ್ತು ಆಡಳಿತಾತ್ಮಕ ವೆಚ್ಚಗಳನ್ನು ಆಂತರಿಕ ಸಂಪನ್ಮೂಲದಿಂದಲೇ ಭರಿಸಬೇಕಾಗುತ್ತದೆ. ಈ ಹಿನ್ನೆಲೆಯಲ್ಲಿ, ವಿದ್ಯಾರ್ಥಿಗಳಿಂದ ಸಂಗ್ರಹವಾಗುವ ಪೂರ್ಣ ಶುಲ್ಕವನ್ನು ಒಂದೇ ಉದ್ದೇಶಕ್ಕೆ ಹಂಚಿಕೆ ಮಾಡಲು ಆಗುವುದಿಲ್ಲ. ಕ್ರೀಡಾ ಮೂಲಭೂತ ಸೌಲಭ್ಯಗಳ ಅಭಿವೃದ್ಧಿಗಾಗಿ 'ಖೇಲೋ ಇಂಡಿಯಾ' ಸೇರಿದಂತೆ ಸರ್ಕಾರ ಮತ್ತು ಸರ್ಕಾರೇತರ ಅನುದಾನಿತ ಸಂಸ್ಥೆಗಳಿಗೆ ಪ್ರಸ್ತಾವನೆ ಸಲ್ಲಿಸಿದಲ್ಲಿ ಹೆಚ್ಚಿನ ವಿಶೇಷ ಅನುದಾನ ಪಡೆಯಬಹುದು ಎಂದರು. ಹಣಕಾಸು ಅಧಿಕಾರಿಗಳು ಮಾತನಾಡಿ, ಸರ್ಕಾರದ ಏಕರೂಪ ಶುಲ್ಕವನ್ನು ವಿಶ್ವವಿದ್ಯಾಲಯದಲ್ಲಿ ಜಾರಿಗೊಳಿಸಿದಲ್ಲಿ ಹೆಚ್ಚಿನ ಸಂಪನ್ಮೂಲವನ್ನು ನಿರೀಕ್ಷಿಸಬಹುದು. ಕ್ರೀಡಾಭಿವೃದ್ಧಿಗೆ ಒದಗಿಸಿರುವ ಅನುದಾನದಲ್ಲಿ ಬಹಳಷ್ಟು ಮೊಬಲಗು ಹಿಂದಿನ ವರ್ಷಗಳ ಬಿಲ್ಲುಗಳನ್ನು ಪಾವತಿಸಲು ವೆಚ್ಚವಾಗಿದೆ. ಪ್ರಸ್ತುತ ಒದಗಿಸಿರುವ ಅನುದಾನ ವೆಚ್ಚವಾದ ನಂತರ ಅಗತ್ಯವಿದ್ದಲ್ಲಿ ಹೆಚ್ಚುವರಿ ಅನುದಾನ ಒದಗಿಸಲಾಗುವುದು ಎಂದರು. ಸದಸ್ಯರಾದ ಡಾ.ಶೇಖರ್‌ರವರು ಮಾತನಾಡಿ ಏಕರೂಪದ ಶುಲ್ಕದಿಂದಾಗಿ ಅಧಿಕವಾಗಿರುವ ಪ್ರವೇಶ ಇತ್ಯಾದಿ ಶುಲ್ಕಗಳನ್ನು ಭರಿಸಲು ವಿದ್ಯಾರ್ಥಿಗಳಿಗೆ ಕಷ್ಟವಾಗುತ್ತದೆ ಎಂದರು.

ಸದಸ್ಯರಾದ ಡಾ.ಜಿ. ಮಧುರವರು ಮಾತನಾಡಿ, ಬಿ.ಇಡಿ. ವಿದ್ಯಾರ್ಥಿಗಳು ಕ್ರೀಡಾ ಹಾಗೂ ಇ.ಸಿ.ಎ. ಶುಲ್ಕ ಪಾವತಿಸುತ್ತಿದ್ದಾರೆ. ಆದರೆ, ಅವರಿಗೆ ಕ್ರೀಡಾ ಚಟುವಟಿಕೆಗಳನ್ನು ನಡೆಸುತ್ತಿಲ್ಲ ಎಂದರು. ಪ್ರೊ.ಎಸ್.ಎಸ್.ಪಾಟೀಲ್‌ರವರು ಮಾತನಾಡಿ ಸಾಮಾನ್ಯ ಪದವಿ ವಿದ್ಯಾರ್ಥಿಗಳು ಹಾಗೂ ಬಿ.ಇಡಿ., ವಿದ್ಯಾರ್ಥಿಗಳ ಶೈಕ್ಷಣಿಕ ವೇಳಾಪಟ್ಟಿ ಬೇರೆ ಬೇರೆಯಾಗಿದೆ. ಇದರಿಂದಾಗಿ, ಬಿ.ಇಡಿ., ವಿದ್ಯಾರ್ಥಿಗಳು ವಿಶ್ವವಿದ್ಯಾಲಯದ ಇತರೆ ವಿದ್ಯಾರ್ಥಿಗಳೊಂದಿಗೆ ಕ್ರೀಡಾ ಸ್ಪರ್ಧೆಗಳಲ್ಲಿ ಭಾಗವಹಿಸಲು ಸಾಧ್ಯವಾಗುವುದಿಲ್ಲ. ಈ ಹಿನ್ನೆಲೆಯಲ್ಲಿ, ಬಿ.ಇಡಿ. ವಿದ್ಯಾರ್ಥಿಗಳಿಗಾಗಿಯೇ ಪ್ರತ್ಯೇಕವಾದ ಕ್ರೀಡಾ ಮತ್ತು ಸಾಂಸ್ಕೃತಿಕ ಸ್ಪರ್ಧೆಗಳನ್ನು ಪ್ರತಿ ವರ್ಷ ಒಂದೊಂದು ಕಾಲೇಜಿನಲ್ಲಿ ನಡೆಸಲಾಗುತ್ತಿತ್ತು. ಇದಕ್ಕಾಗಿ ವಿಶ್ವವಿದ್ಯಾಲಯದಿಂದ ಅನುದಾನ ಕೂಡ ನೀಡುತ್ತಿದ್ದರು. ಇದನ್ನು ಮತ್ತೆ ಆರಂಭಿಸಿದರೆ ಅನುಕೂಲವಾಗುತ್ತದೆ ಎಂದರು. ಮಾನ್ಯ ಕುಲಪತಿಯವರು ಮಾತನಾಡಿ, ಬಿ.ಇಡಿ. ಕಾಲೇಜುಗಳಿಗೆ ಪ್ರತ್ಯೇಕವಾದ ಕ್ರೀಡಾ ಮತ್ತು ಸಾಂಸ್ಕೃತಿಕ ಕಾರ್ಯಕ್ರಮಗಳನ್ನು ಏರ್ಪಡಿಸಲು ವಿಶ್ವವಿದ್ಯಾಲಯದ ಎಂ.ಇಡಿ. ಹಾಗೂ ದೈಹಿಕ ಶಿಕ್ಷಣ ನಿರ್ದೇಶನಾಲಯದಿಂದ ಕಾರ್ಯಚಟುವಟಿಕೆಗಳನ್ನು ರೂಪಿಸಲು ಮತ್ತು ಇದಕ್ಕೆ ಅನುದಾನ ಒದಗಿಸಲು ಕ್ರಮ ಕೈಗೊಳ್ಳಲಾಗುವುದು ಎಂದರು.

ಗ್ರಂಥಪಾಲಕರಾದ ಡಾ. ಆರ್.ಹೆಚ್. ವಾಲ್ಮೀಕಿ ರವರು ಮಾತನಾಡಿ, ಗ್ರಂಥಾಲಯ ಪುಸ್ತಕಗಳ ಖರೀದಿಗಾಗಿ ಹೆಚ್ಚಿನ ಅನುದಾನ ಒದಗಿಸಲಾಗಿದೆ. ಆದರೆ, ಪರಾಮರ್ಶನ ಪುಸ್ತಕ ಮತ್ತು ನಿಯತಕಾಲಿಕೆಗಳಿಗಾಗಿ ಹೆಚ್ಚಿನ ಅನುದಾನದ ಅಗತ್ಯವಿದೆ. ಅಲ್ಲದೇ, ಎಲೆಕ್ಟ್ರಾನಿಕ್ಸ್ ರಿಸೋರ್ಸ್‌ಗೆ ಪ್ರತ್ಯೇಕ ಶೀರ್ಷಿಕೆಯೊಂದಿಗೆ ಅನುದಾನ ಒದಗಿಸಬೇಕು ಎಂದರು. ಮಾನ್ಯ ಕುಲಪತಿಯವರು ಮಾತನಾಡಿ, ಬಹಳಷ್ಟು ಜರ್ನಲ್‌ಗಳು ಆನ್‌ಲೈನ್‌ನಲ್ಲಿ ಲಭ್ಯವಿದೆ. ಪುಸ್ತಕಗಳನ್ನು ಸ್ಟ್ಯಾಂಡರ್ಡ್ ಪಬ್ಲಿಷರ್ಸ್‌ಗಳಿಂದ ಖರೀದಿಸಿದರೆ, ಉಚಿತ ಆನ್‌ಲೈನ್ ಸವಲತ್ತುಗಳು ದೊರೆಯುತ್ತವೆ ಎಂದರು.

ಸದಸ್ಯರಾದ ಡಾ.ಕೆ.ಉಮೇಶ್‌ರವರು ಮಾತನಾಡಿ, ಕೋವಿಡ್-19 ರ ನಂತರದಲ್ಲಿ 'ಸಹ್ಯಾದ್ರಿ ಉತ್ಸವ' ನಡೆಸಿಲ್ಲ. ಇದರಿಂದಾಗಿ ವಿದ್ಯಾರ್ಥಿಗಳು ಅಂತರ ಕಾಲೇಜು ಹಾಗೂ ಅಂತರ ವಿಶ್ವವಿದ್ಯಾಲಯ ಸಾಂಸ್ಕೃತಿಕ ಸ್ಪರ್ಧೆಗಳಲ್ಲಿ ಪಾಲ್ಗೊಳ್ಳುವ ಅವಕಾಶದಿಂದ ವಂಚಿತರಾಗಿದ್ದಾರೆ. ಸಹ್ಯಾದ್ರಿ ಉತ್ಸವವನ್ನು ಆರಂಭಿಸುವ ಮೂಲಕ ವಿದ್ಯಾರ್ಥಿಗಳ ಪ್ರತಿಭೆ ಅನಾವರಣಕ್ಕೆ ಅವಕಾಶ ಮಾಡಿಕೊಡಬೇಕು ಎಂದರು. ಡಾ.ಸಣ್ಣಹನುಮಪ್ಪರವರು ಮಾತನಾಡಿ, ಪಠ್ಯೇತರ ಚಟುವಟಿಕೆ

Scanned with OKEN Scanner

ವಿಭಾಗದ ಸಂಚಾಲಕರ ಸಮಸ್ಯೆಯಿಂದ ವಿಶ್ವವಿದ್ಯಾಲಯವು ಸಹ್ಯಾದ್ರಿ ಉತ್ಸವವನ್ನು ನಡೆಸಲಾಗದಿದ್ದರೆ, ಸಂಯೋಜಿತ ಕಾಲೇಜುಗಳಿಗೆ ಅವಕಾಶ ಮಾಡಿಕೊಟ್ಟಲ್ಲಿ ಯಶಸ್ವಿಯಾಗಿ ನಡೆಸಿಕೊಡಲಾಗುವುದು. ಇದರಿಂದ ವಿದ್ಯಾರ್ಥಿಗಳು ಅವಕಾಶ ವಂಚಿತರಾಗುವುದಿಲ್ಲ ಎಂದರು. ಮಾನ್ಯ ಕುಲಪತಿಯವರು ಮಾತನಾಡಿ ಪಠ್ಯೇತರ ಚಟುವಟಿಕೆಗಳಿಗಾಗಿ ಆಯ-ವ್ಯಯದಲ್ಲಿ ರೂ.20.00 ಲಕ್ಷಗಳನ್ನು ಒದಗಿಸಲಾಗಿದೆ. ಶೀಘ್ರದಲ್ಲಿಯೇ ಪಠ್ಯೇತರ ಚಟುವಟಿಕೆಗಳಿಗೆ ಸಂಚಾಲಕರನ್ನು ನೇಮಕ ಮಾಡಿ ಕಾರ್ಯಕ್ರಮಗಳನ್ನು ನಡೆಸಲಾಗುವುದು ಎಂದರು.

ಡಾ.ಸಣ್ಣಹನುಮಪ್ಪರವರು ಮಾತನಾಡಿ, Rovers and Rangers ಗಾಗಿ ಕಾಲೇಜಿನ ವಿದ್ಯಾರ್ಥಿಳಿಂದ ಪ್ರತ್ಯೇಕವಾದ ಶುಲ್ಕವನ್ನು ಸಂಗ್ರಹ ಮಾಡುತ್ತಿದ್ದು, ವಿದ್ಯಾರ್ಥಿಗಳಿಗೆ ಕಾರ್ಯಕ್ರಮಗಳು ಆಗುತ್ತಿಲ್ಲ ಎಂದರು.

**ನಿರ್ಣಯ:** ಸುದೀರ್ಘ ಚರ್ಚೆಯ ನಂತರ 2024-25ನೇ ಆರ್ಥಿಕ ವರ್ಷದ ಆಯ-ವ್ಯಯ ಅಂದಾಜು ಪರಿಶೀಲಿಸಿ, ಕೆಲವು ಸಣ್ಣ ಪುಟ್ಟ ಮಾರ್ಪಾಡುಗಳೊಂದಿಗೆ ಅನುಮೋದಿಸಲಾಯಿತು. ಮುಂದುವರೆದು, ಬಿ.ಇಡಿ ಕಾಲೇಜುಗಳಿಗೆ ವಿಶ್ವವಿದ್ಯಾಲಯದ ದೈಹಿಕ ಶಿಕ್ಷಣ ಮತ್ತು ಸ್ನಾತಕೋತ್ತರ ಶಿಕ್ಷಣ ವಿಭಾಗಗಳ ವತಿಯಿಂದ ವಿಶೇಷವಾದ ಕ್ರೀಡಾ ಮತ್ತು ಸಾಂಸ್ಕೃತಿಕ ಚಟುವಟಿಕೆಗಳನ್ನು ಏರ್ಪಡಿಸಲು ಕ್ರಮಕೈಗೊಳ್ಳಬೇಕೆಂದು ಹಾಗೂ ಇದಕ್ಕೆ ವಿಶೇಷ ಅನುದಾನ ಒದಗಿಸಲು ನಿರ್ಣಯಿಸಲಾಯಿತು. ಬಡ ವಿದ್ಯಾರ್ಥಿಗಳ ಅನುದಾನವನ್ನು ಅದರ ಉದ್ದೇಶಕ್ಕಾಗಿ ಬಳಸಿಕೊಳ್ಳಲು ನಿರ್ಣಯಿಸಲಾಯಿತು. ಗ್ರಂಥಾಲಯಕ್ಕೆ ಆಯವ್ಯಯದಲ್ಲಿ Open Access Resources ಗೆ ಆಯವ್ಯಯದಲ್ಲಿ ಪ್ರತ್ಯೇಕ ಶೀರ್ಷಿಕೆಗಾಗಿ ಗ್ರಂಥಾಲಯ ಸಲಹಾ ಸಮಿತಿ ಸಭೆಯಲ್ಲಿ ನಿರ್ಣಯವಾಗಿದ್ದು, ಅದನ್ನು ಪರಿಶೀಲಿಸಿ ಕ್ರಮಕೈಗೊಳ್ಳಲು ನಿರ್ಣಯಿಸಲಾಯಿತು. ಪಠ್ಯೇತರ ಚಟುವಟಿಕೆ ವಿಭಾಗಕ್ಕೆ ಸಂಚಾಲಕರನ್ನು ನೇಮಕಮಾಡಲು ಹಾಗೂ ಪಠ್ಯೇತರ ಚಟುವಟಿಕೆ ಕಾರ್ಯಕ್ರಮಗಳನ್ನು ಹಾಗೂ ಕಾಲೇಜು ವಿದ್ಯಾರ್ಥಿಗಳಿಗಾಗಿ Rovers and Rangers ಕಾರ್ಯಕ್ರಮಗಳನ್ನು ಸಮರ್ಪಕವಾಗಿ ನಡೆಸಲು ನಿರ್ಣಯಿಸಲಾಯಿತು.

**ಪರೀಕ್ಷಾ ವಿಭಾಗ**

**2024:ಎಸಿ-1.11:** ದ್ವಿಗುಣ ಅವಧಿ ಪೂರ್ಣಗೊಳಿಸಿದ (DOUBLE THE DURATION) ಸ್ನಾತಕ ಮತ್ತು ಸ್ನಾತಕೋತ್ತರ ಪದವಿಯ ಸೆಮಿಸ್ಟರ್ ಪದವಿಯ ವಿದ್ಯಾರ್ಥಿಗಳಿಗೆ ವಿಶೇಷ ಸಂದರ್ಭವೆಂದು ಪರಿಗಣಿಸಿ ಪರೀಕ್ಷೆಗೆ ಅವಕಾಶ ನೀಡುವ ಬಗ್ಗೆ.

**ನಿರ್ಣಯ:** ವಿಷಯವನ್ನು ಮುಂದಿನ ಸಭೆಗೆ ಮುಂದೂಡಲಾಯಿತು.

**ಸದಸ್ಯರು ಮಂಡಿಸಿರುವ ಪ್ರಸ್ತಾವನೆಗಳು ಹಾಗೂ ಇತರೆ ವಿಷಯಗಳು:**

**2024:ಎಸಿ-1.12:** **ಡಾ. ಮಧು ಜಿ.**

1) ದಿನಾಂಕ:19-02-2024ರಂದು ವಿಜಯ ಕರ್ನಾಟಕ ದಿನಪತ್ರಿಕೆಯಲ್ಲಿ "ಕತ್ತಲ್ಲಲ್ಲಿ ಭಾವಿ ಶಿಕ್ಷಕರ ಭವಿಷ್ಯ" ಎಂದು ಪ್ರಕಟವಾಗಿರುವ ಲೇಖನದ ಕುರಿತು ವಿಶ್ವವಿದ್ಯಾಲಯವು ತೆಗೆದುಕೊಂಡಿರುವ ಕ್ರಮದ ವಿವರಗಳ ಮಾಹಿತಿಯನ್ನು ಒದಗಿಸುವುದು.

**ನಿರ್ಣಯ:** ಕುಲಸಚಿವರು (ಪರೀಕ್ಷಾಂಗ)-ಇವರು ನೀಡಿದ ಮಾಹಿತಿಯನ್ನು ಸಭೆಯಲ್ಲಿ ಪ್ರಸ್ತುತ ಪಡಿಸಲಾಯಿತು. ಯು.ಯು.ಸಿ.ಎಂ.ಎಸ್. ಸಮಸ್ಯೆಯನ್ನು ಆದಷ್ಟು ಬೇಗನೆ ಬಗೆಹರಿಸಿ ಬಿ.ಇಡಿ. ವಿದ್ಯಾರ್ಥಿಗಳ ಫಲಿತಾಂಶ ಪ್ರಕಟಣೆಗೆ ಕ್ರಮವಹಿಸಬೇಕೆಂದು ನಿರ್ಣಯಿಸಲಾಯಿತು.

2) ದಿನಾಂಕ:16-02-2024ರಂದು ವಿಜಯ ಕರ್ನಾಟಕ ಪತ್ರಿಕೆಯಲ್ಲಿ "ಅಂತಿಮ ವರ್ಷದಲ್ಲಿ ಮೊದಲ ಸೆಮಿಸ್ಟರ್ ಪರೀಕ್ಷೆ" ಎಂದು ಪ್ರಕಟವಾಗಿರುವ ಲೇಖನದ ಕುರಿತು ವಿಶ್ವವಿದ್ಯಾಲಯವು ತೆಗೆದುಕೊಂಡಿರುವ ಕ್ರಮದ ವಿವರಗಳ ಮಾಹಿತಿಯನ್ನು ಒದಗಿಸುವುದು.

ಕುಲಸಚಿವ (ಮೌಲ್ಯಮಾಪನ)ರವರು ಮಾತನಾಡುತ್ತಾ, ಸ್ನಾತಕ ಪದವಿಯ ಪ್ರಥಮ ಸೆಮಿಸ್ಟರ್ ಪ್ರಾಯೋಗಿಕ ಪತ್ರಿಕೆಗಳನ್ನು ಒಳಗೊಂಡು ಫಲಿತಾಂಶ ಪ್ರಕಟಿಸಲಾಗಿತ್ತು, ಕೆಲವು



Scanned with OKEN Scanner

ತಾಂತ್ರಿಕ ತೊಂದರೆಗಳಿಂದಾಗಿ ಸದರಿ ಪತ್ರಿಕೆಗಳಿಗೆ ಪ್ರಾಯೋಗಿಕ ಪತ್ರಿಕೆಗಳನ್ನು ತೆಗೆದು ಫಲಿತಾಂಶವನ್ನು ಪ್ರಕಟಿಸಿದ ನಂತರದಲ್ಲಿ ಕೆಲವು ವಿದ್ಯಾರ್ಥಿಗಳು Financial Accounting, Digital Fluency & Fundamental of Business Accounting ವಿಷಯಗಳಲ್ಲಿ ಅನುತ್ತೀರ್ಣರಾಗಿರುವುದರಿಂದ ಪ್ರಸ್ತುತ ನಡೆಯುವ ಪರೀಕ್ಷೆಯಲ್ಲಿ ಅನುತ್ತೀರ್ಣರಾದ ವಿದ್ಯಾರ್ಥಿಗಳಿಗೆ ಮಾತ್ರ ಪರೀಕ್ಷೆಯನ್ನು ತೆಗೆದುಕೊಳ್ಳಲು ಸೂಚಿಸಿದೆ. ಈ ಪತ್ರಿಕೆಗಳಲ್ಲಿ ಕೆಲವು ತಾಂತ್ರಿಕ ಸಮಸ್ಯೆಗಳಾಗಿವೆ. ಅವುಗಳನ್ನು ಬಗೆಹರಿಸಲಾಗುತ್ತಿದ್ದು, ವಿದ್ಯಾರ್ಥಿಗಳು ಪರೀಕ್ಷಾ ಶುಲ್ಕ ಪಾವತಿಸಿ ಪರೀಕ್ಷೆಗೆ ಹಾಜರಾಗುತ್ತಿದ್ದಾರೆ. ಈ ಹಿಂದೆ ಪರೀಕ್ಷಾ ಶುಲ್ಕವನ್ನು ಪಾವತಿಸಿದ ವಿದ್ಯಾರ್ಥಿಗಳು ಮತ್ತೊಮ್ಮೆ ಪಾವತಿಸುವ ಅಗತ್ಯವಿರುವುದಿಲ್ಲವೆಂದು ಸುತ್ತೋಲೆ ಮೂಲಕ ಕಾಲೇಜುಗಳಿಗೆ ತಿಳಿಸಿದೆ ಎಂದು ಮಾಹಿತಿ ನೀಡಿದರು.

3) ಕಳೆದ ಮಾರ್ಚ್-2023 ರಂದು ಬಿ.ಇಡಿ. ಪದವಿಯಲ್ಲಿ ಉತ್ತೀರ್ಣರಾಗಿ "ಸರ್ಕಾರದ ಯುವನಿಧಿಗೆ" ಅರ್ಜಿ ಸಲ್ಲಿಸುವ ವಿದ್ಯಾರ್ಥಿಗಳಿಗೆ "ಶೈಕ್ಷಣಿಕ ವರ್ಷದಲ್ಲಿ ಪದವಿ ಪಡೆದಿದ್ದರು. NAD ಡೇಟಾಬೇಸ್‌ನಲ್ಲಿ ಡೇಟಾ ಕಂಡುಬಂದಿಲ್ಲವಾದ್ದರಿಂದ ದಯವಿಟ್ಟು ನಿಮ್ಮ ಸಂಬಂಧಿತ ಕಾಲೇಜು /ಬೋರ್ಡ್ ಅಥವಾ ವಿಶ್ವವಿದ್ಯಾಲಯ ಸಂಪರ್ಕಿಸಿ" ಎಂದು ಬರುತ್ತಿದ್ದು ಇದಕ್ಕೆ ಸಂಬಂಧಿಸಿದಂತೆ, ಮಾಹಿತಿಯ ವಿವರಗಳನ್ನು ಒದಗಿಸುವುದು.

ಕುಲಸಚಿವ (ಮೌಲ್ಯಮಾಪನ)ರವರು ಮಾಹಿತಿ ನೀಡುತ್ತಾ, ಮಾರ್ಚ್-2023ರಲ್ಲಿ ನಡೆದ ಬಿ.ಇಡಿ ಪರೀಕ್ಷೆಯಲ್ಲಿ ಉತ್ತೀರ್ಣರಾಗಿರುವ ವಿದ್ಯಾರ್ಥಿಗಳ ದತ್ತಾಂಶವನ್ನು NAD ಗೆ ಈಗಾಗಲೇ ಅಪ್‌ಲೋಡ್ ಮಾಡಲಾಗಿದ್ದು, ಇನ್ನೂ ಕೆಲವು ವಿದ್ಯಾರ್ಥಿಗಳ ಮಾಹಿತಿಯು NAD ಗೆ ಅಪ್‌ಲೋಡ್ ಮಾಡುವ ಕಾರ್ಯವು ಪ್ರಗತಿಯಲ್ಲಿರುತ್ತದೆ ಎಂದರು.

4) ಬಿ.ಇ.ಡಿ. ಪರೀಕ್ಷಾ ಸಮಯದಲ್ಲಿ ವಿಶ್ವವಿದ್ಯಾಲಯವು ಪ್ರತೀ ಕಾಲೇಜಿಗೆ ನೀಡುತ್ತಿರುವ ಸ್ಟೇಷನರಿ (ಲೇಖನ ಸಾಮಗ್ರಿಗಳು) ಗೆ ಸಂಬಂಧಿಸಿದಂತೆ ದೂರುಗಳು ಬಂದಿದ್ದು, ವಿಶ್ವವಿದ್ಯಾಲಯವು ಪ್ರತೀ ಕಾಲೇಜಿಗೆ ಪರೀಕ್ಷಾ ಸಮಯದಲ್ಲಿ ಒದಗಿಸಲಾಗುತ್ತಿರುವ ಸ್ಟೇಷನರಿ (ಲೇಖನ ಸಾಮಗ್ರಿಗಳು) ಯ ಮಾಹಿತಿಯ ವಿವರಗಳನ್ನು ಒದಗಿಸುವುದು.

ಕುಲಸಚಿವ (ಮೌಲ್ಯಮಾಪನ)ರವರು ಸದಸ್ಯರಿಗೆ ಲಿಖಿತವಾಗಿ ಮಾಹಿತಿ ನೀಡಿರುವುದಾಗಿ ತಿಳಿಸಿದರು.

**ಅಧ್ಯಕ್ಷರ ಅಪ್ಪಣೆಯ ಮೇರೆಗೆ ಇತರೆ ವಿಷಯಗಳು**

**2024:ಎಸಿ-1.13(ಎ):** **1) ಶ್ರೀ ಡಿ.ಎಸ್.ಅರುಣ್-ಇವರು ಮಂಡಿಸಿದ ವಿಷಯ:- NADನ್ನು ಪರಿಚಯಿಸಿ ಕಡ್ಡಾಯಗೊಳಿಸುವ ಕುರಿತು.**

ಶ್ರೀ ಡಿ.ಎಸ್.ಅರುಣ್‌ರವರು ವಿಷಯ ಮಂಡಿಸಿ ಮಾತನಾಡುತ್ತಾ, ಭಾರತ ಸರ್ಕಾರದ ಶಿಕ್ಷಣ ಸಚಿವಾಲಯವು 2017ರಲ್ಲಿ National Academic Depository (NAD)ಅನ್ನು ಪರಿಚಯಿಸಿ ಕಡ್ಡಾಯಗೊಳಿಸಿತು. ಇದು ಶೈಕ್ಷಣಿಕ ಪದವಿಗಳಿಗೆ ಸುಲಭ ಪ್ರವೇಶವನ್ನು ಖಚಿತಪಡಿಸುವುದಲ್ಲದೆ ಪದವಿಗಳ ಸತ್ಯಾಸತ್ಯತೆ ಮತ್ತು ಸುರಕ್ಷಿತ ಸಂಗ್ರಹಣೆಯನ್ನು ಮೌಲ್ಯೀಕರಿಸುತ್ತದೆ ಮತ್ತು ಖಾತರಿಪಡಿಸುತ್ತದೆ. ನಂತರ ವಿದ್ಯಾರ್ಥಿಗಳು ಹಿಂದಿನ ಕಲಿಕೆಯ ಕ್ರೆಡಿಟ್‌ಗಳನ್ನು ಸಂಗ್ರಹಿಸಲು Academic Bank of Credit (ABC)ನ್ನು ಕಡ್ಡಾಯಗೊಳಿಸಿದೆ ಮತ್ತು ವಿದ್ಯಾರ್ಥಿಗಳ ಸರ್ವತೋಮುಖ ಕಲಿಕೆ, ಅಭಿವೃದ್ಧಿ ಹಾಗೂ ಕ್ರೆಡಿಟ್‌ಗಳನ್ನು ಒಂದು ಶಿಕ್ಷಣ ಸಂಸ್ಥೆಯಿಂದ ಮತ್ತೊಂದು ಶಿಕ್ಷಣ ಸಂಸ್ಥೆಗೆ ವರ್ಗಾಯಿಸಿ ಕಲಿಕೆ ಮುಂದುವರಿಸಲು ಅನುಕೂಲವಾಗುವಂತೆ National Credit Framework (NCrF) ಅನ್ನು 2023ರಂದ ಜಾರಿಗೊಳಿಸಿದೆ. ಇದಲ್ಲದೆ, ಇತ್ತೀಚೆಗೆ 2026-27ರ ವೇಳೆಗೆ "ಒಂದು ರಾಷ್ಟ್ರ, ಒಂದು ವಿದ್ಯಾರ್ಥಿ ಐಡಿ" ಉಪಕ್ರಮವನ್ನು ಹಮ್ಮಿಕೊಂಡಿದ್ದು, ಈಗಾಗಲೇ ಸ್ನಾತಕ ಪದವಿ ಮತ್ತು ಅದರ ಕೆಳ ಹಂತಗಳಲ್ಲಿ ಸುಮಾರು 25 ಕೋಟಿ APAAR (Automated



Scanned with OKEN Scanner

Permanent Academic Account Registry) ID ಗಳನ್ನು ವಿದ್ಯಾರ್ಥಿಗಳಿಗೆ ಕೊಡಮಾಡಲಾಗಿದೆ. ಇನ್ನು ಮುಂದಿನ ವರ್ಷಗಳಲ್ಲಿ ಈ ವಿದ್ಯಾರ್ಥಿಗಳು ಕುವೆಂಪು ವಿಶ್ವವಿದ್ಯಾಲಯಕ್ಕೂ ಪ್ರವೇಶ ಪಡೆಯುವ ಸಾಧ್ಯತೆ ಇರುತ್ತದೆ. ಈ ಹಿನ್ನೆಲೆಯಲ್ಲಿ, ಕುವೆಂಪು ವಿಶ್ವವಿದ್ಯಾಲಯವು ಸ್ನಾತಕೋತ್ತರ ಪದವಿಗಳಿಗೆ ಅಗತ್ಯ ಸಿದ್ಧತೆಯನ್ನು ಮಾಡಿಕೊಳ್ಳಬೇಕು ಎಂದರು.

ಮಾನ್ಯ ಕುಲಪತಿಯವರು ಮಾತನಾಡಿ, ಈ ಕುರಿತಾಗಿ ಕುವೆಂಪು ವಿಶ್ವವಿದ್ಯಾಲಯದಲ್ಲಿ ಈಗಾಗಲೇ ಕ್ರಮ ತೆಗೆದುಕೊಳ್ಳಲಾಗುತ್ತಿದೆ. NADಗೆ ಈಗಾಗಲೇ ವಿದ್ಯಾರ್ಥಿಗಳ ಪರೀಕ್ಷಾ ಡಾಟಾ ಅಪ್‌ಲೋಡ್ ಮಾಡಲಾಗುತ್ತಿದೆ. Academic Bank of Credit ಚಾಲನೆಗೆ ಬಂದಿದ್ದು ಅದನ್ನು NCrF ಪ್ರಕಾರ ನಮ್ಮ ವಿಶ್ವವಿದ್ಯಾಲಯದಲ್ಲಿ ಅಳವಡಿಸಿಕೊಳ್ಳಬೇಕಿದೆ. ಇತ್ತೀಚೆಗೆ APAAR ಸಂಬಂಧ ದೆಹಲಿಯಲ್ಲಿ ನಡೆದ ಸಭೆಯಲ್ಲಿ ಭಾಗವಹಿಸಲಾಗಿದೆ. ನಮ್ಮ ವಿಶ್ವವಿದ್ಯಾಲಯದಲ್ಲಿ 2010ರಲ್ಲಿ ಸ್ನಾತಕೋತ್ತರ CBCS ನಿಯಮಾವಳಿ ಪರಿಷ್ಕರಿಸಿದ್ದು ನಂತರ ಪರಿಷ್ಕರಣೆ ನಡೆಸಿರುವುದಿಲ್ಲ ಮತ್ತು 2004ರ UGC CBCS ಗೈಡ್‌ಲೈನ್ ಅನ್ನು ಸಮರ್ಪಕವಾಗಿ ಬಳಸಿಕೊಂಡಿಲ್ಲ. ಹೀಗಾಗಿ ಯು.ಜಿ.ಸಿ.ಯ ಪ್ರಕಾರ ABC, NCrF, ಗಳನ್ನೊಳಗೊಂಡಂತೆ, ಕುವೆಂಪು ವಿಶ್ವವಿದ್ಯಾಲಯದಲ್ಲಿ ಅಳವಡಿಸಿಕೊಳ್ಳುವ ಸಂಬಂಧ ಪರಿನಿಯಮಗಳಾಗಬೇಕಿದೆ. ಈಗಾಗಲೇ ವಿಶ್ವವಿದ್ಯಾಲಯವು ಪರಿನಿಯಮ ಕರಡು ಸಿದ್ಧಪಡಿಸುವುದಕ್ಕಾಗಿ ಸಮಿತಿಯನ್ನು ರಚಿಸಿದೆ. ಈ ಸಮಿತಿಯು ರೆಗ್ಯುಲೇಷನ್‌ನ ಕರಡನ್ನು ಸಿದ್ಧಪಡಿಸಿದ್ದು, ಇದನ್ನು ಸ್ನಾತಕೋತ್ತರ ಅಧ್ಯಯನ ವಿಭಾಗಗಳಿಗೆ ಕಳುಹಿಸಲಾಗಿದೆ. ವಿಭಾಗಗಳಿಂದ ಪ್ರತಿಕ್ರಿಯೆ ಪಡೆದುಕೊಂಡು, ಅಂತಿಮಗೊಳಿಸಿ ನಿಕಾಯ, ವಿದ್ಯಾವಿಷಯಕ ಪರಿಷತ್ತು ಹಾಗೂ ಸಿಂಡಿಕೇಟ್ ಸಭೆಗಳ ಅನುಮೋದನೆ ಪಡೆದುಕೊಂಡು ಘನತೆವೆತ್ತ ಕುಲಾಧಿಪತಿಯವರ ಅಂಕಿತಕ್ಕಾಗಿ ಸರ್ಕಾರಕ್ಕೆ ಕಳುಹಿಸಲಾಗುವುದು. ಇದನ್ನು ಜಾರಿಗೆ ತಂದಲ್ಲಿ ಯು.ಯು.ಸಿ.ಎಂ.ಎಸ್., ಹಾಗೂ ಸ್ನಾತಕೋತ್ತರ ಕಾರ್ಯಕ್ರಮಗಳ ರೆಗ್ಯುಲೇಷನ್‌ಗೆ ಹೊಂದಾಣಿಕೆ ಆಗುತ್ತದೆ, ಸಮಸ್ಯೆಗಳು ಕೂಡ ಕಡಿಮೆಯಾಗುತ್ತವೆ ಎಂದರು.

ಶ್ರೀ ಡಿ.ಎಸ್.ಅರುಣ್‌ರವರು ಮುಂದುವರೆದು ಮಾತನಾಡಿ, ನಮ್ಮ ವಿಶ್ವವಿದ್ಯಾಲಯದ ಪರೀಕ್ಷೆಗಳು ವಿಳಂಬವಾಗುತ್ತಿದ್ದು, ಫಲಿತಾಂಶ ಪ್ರಕಟಣೆ ತಡವಾದಲ್ಲಿ ವಿದ್ಯಾರ್ಥಿಗಳು ಬೇರೆ ವಿಶ್ವವಿದ್ಯಾಲಯದವರೊಂದಿಗೆ ಉದ್ಯೋಗ ಹಾಗೂ ಉನ್ನತ ಶಿಕ್ಷಣದಲ್ಲಿ ಸ್ಪರ್ಧಿಸಲು ಕಷ್ಟವಾಗುತ್ತದೆ ಎಂದರು. ಕಾಲೇಜು ಅಭಿವೃದ್ಧಿ ಪರಿಷತ್ತಿನ ನಿರ್ದೇಶಕರಾದ ಪ್ರೊ.ನಾಗರಾಜರವರು ಮಾತನಾಡಿ, ಈ ಹಿಂದೆ ಕುವೆಂಪು ವಿಶ್ವವಿದ್ಯಾಲಯವು ಪರೀಕ್ಷಾ ವ್ಯವಸ್ಥೆಯಲ್ಲಿ ರಾಜ್ಯದಲ್ಲಿಯೇ ಮುಂದಿತ್ತು. ನಾವು ಬಳಸುತ್ತಿದ್ದ ತಾಂತ್ರಿಕತೆ ಉನ್ನತ ಮಟ್ಟದ್ದಾಗಿತ್ತು. ಈಗಿನ ಯು.ಯು.ಸಿ.ಎಂ.ಎಸ್., ಸಾಫ್ಟ್‌ವೇರ್ ಬಳಕೆದಾರರ ಸ್ನೇಹಿಯಾಗಿಲ್ಲ. ಸಣ್ಣಪುಟ್ಟ ಸಮಸ್ಯೆಗಳನ್ನು ಪರಿಹರಿಸಲು ವಿಶ್ವವಿದ್ಯಾಲಯ/ಕಾಲೇಜುಗಳಿಗೆ ಅವಕಾಶವಿರುವುದಿಲ್ಲ. ಎಲ್ಲದಕ್ಕೂ ಯು.ಯು.ಸಿ.ಎಂ.ಎಸ್., ಬೆಂಗಳೂರು ಕಛೇರಿಯನ್ನೇ ಅವಲಂಬಿಸಬೇಕು. ನಮ್ಮಲ್ಲಿ ಪ್ರತಿ ಕೋರ್ಸ್‌ಗೂ ರಾಜ್ಯಪಾಲರಿಂದ ಅನುಮೋದಿತ ರೆಗ್ಯುಲೇಷನ್‌ಗಳಿವೆ. ಇದನ್ನು ಬಿಟ್ಟು ಸರ್ಕಾರ ತಿಳಿಸಿದಂತೆ ಅಳವಡಿಸಿಕೊಂಡಲ್ಲಿ ಅನೇಕ ತಾಂತ್ರಿಕ ಸಮಸ್ಯೆಗಳಾಗುತ್ತವೆ ಇದನ್ನು ಸರ್ಕಾರದ ಗಮನಕ್ಕೆ ತಂದರೆ ಉತ್ತಮ ಎಂದರು. ಕುಲಸಚಿವ (ಮೌಲ್ಯಮಾಪನ)ರವರು ಮಾತನಾಡಿ, ಯು.ಯು.ಸಿ.ಎಂ.ಎಸ್., ಸಾಫ್ಟ್‌ವೇರ್‌ನಲ್ಲಿ ಪರೀಕ್ಷೆಗೆ ಮುನ್ನ ಕಾಲೇಜಿನವರು ವಿದ್ಯಾರ್ಥಿಗಳ ಮಾಹಿತಿಯನ್ನು ಪರೀಕ್ಷಿಸಲು/ಮಾರ್ಪಾಡು ಮಾಡಲು ಅವಕಾಶವಿಲ್ಲ. ಆದುದರಿಂದ, ಯು.ಯು.ಸಿ.ಎಂ.ಎಸ್., ಸಾಫ್ಟ್‌ವೇರ್‌ನ್ನು ಬಳಕೆದಾರರ ಸ್ನೇಹಿಯಾಗಿಸಿ, ಪರೀಕ್ಷೆಗೆ ಮುನ್ನ ಕಾಲೇಜುಗಳಿಗೆ ಮತ್ತು ಫಲಿತಾಂಶ ಪ್ರಕಟಣೆಯವರೆಗೆ ಸಣ್ಣಪುಟ್ಟ ತಿದ್ದುಪಡಿಗಳಿಗೆ ವಿಶ್ವವಿದ್ಯಾಲಯಕ್ಕೆ ಅವಕಾಶ ಮಾಡಿಕೊಟ್ಟು,



Scanned with OKEN Scanner

ಫಲಿತಾಂಶ ಪ್ರಕಟವಾದ ನಂತರ ಕೇಂದ್ರ ಕಛೇರಿಯವರು ಫ್ರೀಜ್ ಮಾಡಬಹುದಾಗಿದ್ದು, ಇದರಿಂದ ಗರಿಷ್ಠ ಮಟ್ಟದ ಸಮಸ್ಯೆಗಳು ಬಗೆಹರಿಯುತ್ತವೆ ಎಂದರು.

ಶ್ರೀ ಡಿ.ಎಸ್.ಅರುಣ್‌ರವರು ಮಾತನಾಡಿ, ಇದು ಬಹಳ ಗಂಭೀರ ವಿಷಯವಾಗಿದ್ದು, ಇದರ ಕುರಿತಾಗಿ, ಬೆಂಗಳೂರಿಗೆ ತೆರಳಿ ಸರ್ಕಾರಕ್ಕೆ ಒಂದು ವಿವರವಾದ ಪ್ರಸ್ತಾವನೆಯನ್ನು ಸಲ್ಲಿಸೋಣ ಎಂದರು. ಎಲ್ಲಾ ಸದಸ್ಯರು ಇದಕ್ಕೆ ಸಹಮತ ವ್ಯಕ್ತಪಡಿಸಿದರು.

2024:ಎಸಿ–1.13(ಬಿ): **ಡಾ. ಶೇಖರ್:**

ಡಾ.ಶೇಖರ್‌ರವರು ವಿಷಯ ಮಂಡಿಸಿ ಮಾತನಾಡಿ, Open Elective ನಲ್ಲಿ ವಿದ್ಯಾರ್ಥಿಗಳು ತಮಗೆ ಇಷ್ಟವಾದ ವಿಷಯ ಆಯ್ಕೆ ಮಾಡಿಕೊಂಡು ಅಧ್ಯಯನ ಮಾಡಲು ಅವಕಾಶ ನೀಡಬೇಕು. ಕಲಾ ಮತ್ತು ವಾಣಿಜ್ಯದ ವಿದ್ಯಾರ್ಥಿಗಳು ವಿಜ್ಞಾನದ ಕೆಲವು ವಿಷಯಗಳನ್ನು ತೆಗೆದುಕೊಂಡಿದ್ದು, ಹಲವಾರು ವಿದ್ಯಾರ್ಥಿಗಳು ಅನುತ್ತೀರ್ಣರಾಗಿದ್ದಾರೆ. ಅವರು ಉತ್ತೀರ್ಣರಾಗಲು ಸಾಧ್ಯವಾಗುತ್ತಿಲ್ಲ ಎಂದರು.

ಮುಂದುವರೆದು ಮಾತನಾಡಿದ ಅವರು, Employability Skills ವಿಷಯವನ್ನು ಕಾಲೇಜಿನ ಯಾವುದೇ ಅಧ್ಯಾಪಕರು ಬೋಧಿಸಬಹುದು ಎಂದು ಹಿಂದಿನ ಸಭೆಯಲ್ಲಿ ನಿರ್ಣಯವಾಗಿದ್ದರೂ ಕೂಡ ವಿಶ್ವವಿದ್ಯಾಲಯದಿಂದ ಈವರೆಗೂ ಸುತ್ತೋಲೆ ಬಂದಿಲ್ಲ. ಇದರಿಂದ ಕಾರ್ಯಭಾರ ಸಿದ್ಧಪಡಿಸಿ ಸರ್ಕಾರದ ಅನುಮೋದನೆ ಪಡೆಯಲು ತೊಂದರೆಯಾಗುತ್ತದೆ. ಆದಷ್ಟು ಬೇಗನೆ ಸುತ್ತೋಲೆ ಹೊರಡಿಸಿ ಎಂದರು.
ಈ ಬಗ್ಗೆ ಪರಿಶೀಲಿಸಿ ಶೀಘ್ರ ಕ್ರಮಕೈಗೊಳ್ಳುವುದಾಗಿ ಮಾನ್ಯ ಕುಲಪತಿಯವರು ತಿಳಿಸಿದರು.

2024:ಎಸಿ–1.13(ಸಿ): **ಡಾ. ಸಣ್ಣಹನುಮಪ್ಪ:**

ರಾಜ್ಯದ ಕೆಲವು ವಿಶ್ವವಿದ್ಯಾಲಯಗಳಲ್ಲಿ ಸಮ ಸೆಮಿಸ್ಟರ್‌ನ ತರಗತಿಗಳು ಫೆಬ್ರವರಿ ತಿಂಗಳಿನಲ್ಲಿಯೇ ಆರಂಭವಾಗಿದ್ದು, ಮತ್ತೆ ಕೆಲವು ವಿಶ್ವವಿದ್ಯಾಲಯಗಳಲ್ಲಿ 15ನೇ ಮಾರ್ಚ್‌ನಲ್ಲಿ ಆರಂಭಿಸುತ್ತಿದ್ದಾರೆ. ನಮ್ಮ ವಿಶ್ವವಿದ್ಯಾಲಯದಲ್ಲಿ 15ನೇ ಏಪ್ರಿಲ್‌ನಿಂದ ಆರಂಭಿಸುವುದಾಗಿ ಸುತ್ತೋಲೆ ಹೊರಡಿಸಲಾಗಿದೆ. ಬೇರೆ ವಿಶ್ವವಿದ್ಯಾಲಯಗಳಿಗೆ ಹೋಲಿಸಿದರೆ ನಾವು ಸುಮಾರು ಒಂದೂವರೆ ತಿಂಗಳುಗಳಷ್ಟು ಹಿಂದಿದ್ದೇವೆ. ಇದನ್ನು ಪರಿಷ್ಕರಿಸಿ ಕನಿಷ್ಠ 15 ದಿನಗಳು ಹಿಂದೂಡಿದರೆ ಉತ್ತಮ ಎಂದರು. ಮುಂದುವರೆದು ಮಾತನಾಡಿದ ಅವರು, ವಿಶ್ವವಿದ್ಯಾಲಯದಲ್ಲಿ ಪ್ರಾಂಶುಪಾಲರುಗಳ ಸಭೆ ಕರೆದು ಅಭಿಪ್ರಾಯ ಪಡೆದುಕೊಂಡು ನಿರ್ಣಯ ತೆಗೆದುಕೊಳ್ಳುತ್ತಿಲ್ಲ. ಇದರಿಂದಾಗಿ, ಈ ರೀತಿ ಆಗುತ್ತಿದೆ ಎಂದರು. ಶ್ರೀ ಡಿ.ಎಸ್.ಅರುಣ್‌ರವರು ಮಾತನಾಡಿ, ಈಗ 15 ದಿನಗಳಷ್ಟು ಹಿಂದೂಡಿ ಸರಿದೂಗಿಸಿಕೊಂಡರೆ, ಮುಂದಿನ ಸೆಮಿಸ್ಟರ್‌ನಲ್ಲಿ ಮತ್ತೆ 15 ದಿನಗಳು ಹಿಂದೂಡಿ ಸರಿಹೊಂದಿಸಿದರೆ ಮುಂದಿನ ದಿನಗಳಲ್ಲಿ ಶೈಕ್ಷಣಿಕ ವೇಳಾಪಟ್ಟಿಯು ಸರಿದಾರಿಗೆ ಬರುತ್ತದೆ ಎಂದರು.

ಮಾನ್ಯ ಕುಲಪತಿಯವರು ಮಾತನಾಡುತ್ತಾ, ಶೈಕ್ಷಣಿಕ ವೇಳಾಪಟ್ಟಿಯನ್ನು ಸಿದ್ಧಪಡಿಸುವಾಗ ಸಮಿತಿಯು ಮೌಲ್ಯಮಾಪನಕ್ಕೆ ಹೆಚ್ಚಿನ ಸಮಯಾವಕಾಶ ನೀಡಬೇಕು ಎಂದು ನಿರ್ಣಯಿಸಿದೆ ಎಂದರು. ಕುಲಸಚಿವ (ಮೌಲ್ಯಮಾಪನ)ರವರು ಮಾತನಾಡಿ, ಮೌಲ್ಯಮಾಪನ ಕೇಂದ್ರಗಳನ್ನು ಹೆಚ್ಚಿಸಿ ಆದಷ್ಟು ಬೇಗನೆ ಮೌಲ್ಯಮಾಪನ ಮುಗಿಸಲು ಕ್ರಮವಹಿಸಲಾಗುತ್ತಿದೆ ಎಂದರು.

ಅಂತಿಮವಾಗಿ ಸಭೆಗೆ ಆಗಮಿಸಿ ಸೂಕ್ತ ಸಲಹೆ, ಸಹಕಾರ ನೀಡಿದ ಎಲ್ಲಾ ಸದಸ್ಯರುಗಳಿಗೆ ಕುಲಸಚಿವರು ಹೃತ್ಪೂರ್ವಕವಾಗಿ ವಂದಿಸಿದ ನಂತರ ಸಭೆಯ ಕಲಾಪಗಳು ಮುಕ್ತಾಯವಾದವು.

27/6/24

ಕುಲಸಚಿವರು

ಕುಲಸಚಿವರು
ಕುವೆಂಪು ವಿಶ್ವವಿದ್ಯಾನಿಲಯ
ಜ್ಞಾನಸಹ್ಯಾದ್ರಿ
ಶಂಕರಘಟ್ಟ-577 451
ಶಿವಮೊಗ್ಗ ಜಿಲ್ಲೆ

27/6/2024

ಸಹಿ/–
ಕುಲಪತಿಗಳು



Scanned with OKEN Scanner